**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

ಮಾನವಿ

CC No. 265/2018

| ಪ್ರಾಸಾಃ | 5 |
|---|---|

ಸಾಕ್ಷಿದಾರರ ಹೆಸರು : ಸಿದ್ದಯ್ಯ ಸ್ವಾಮಿ

ತಂದೆಯ ಹೆಸರು : ಪಂಪಯ್ಯ

ವಯಸ್ಸು : 63 ವರ್ಷ

ಉದ್ಯೋಗ : ನಿವೃತ್ತ ಎ.ಎಸ್.ಐ

ವಾಸ ಸ್ಥಳ : ಮಾನವಿ

**ದಿನಾಂಕ 24.10.2025 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಕಲಂ 299 ಸಿಆರ್‌ಪಿಸಿರಡಿಯಲ್ಲಿ ಮಾನ್ಯ ಎ.ಪಿ.ಪಿ.ಯವರಿಂದ**

ಮಾರ್ಚ-2017 ರಿಂದ ನವೆಂಬರ -2022 ರವರೆಗೆ ನಾನು ಮಾನ್ವಿ ಪೊಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮಾನ್ಯ ನ್ಯಾಯಾಲಯದಿಂದ ಉದ್‌ಘೋಷಣ ಆದೇಶವನ್ನು ಸ್ವೀಕರಿಸಿ ಈ ಕೇಸಿನ ಆರೋಪಿಯಾದ ಆನಂದ ತಂದೆ ಪಂಪಣ್ಣ ಸಾಃ ಪೊತ್ನಾಳದಲ್ಲಿ ವಾರೆಂಟನ್ನು ಹೊರಡಿಸಿದ್ದು ಅದನ್ನು ಸ್ವೀಕರಿಸಿ ದಿನಾಂಕ 24-08-2018 ಆರೋಪಿಯ ವಾಸಸ್ಥಳ ಪೊತ್ನಾಳದಲ್ಲಿರುವ ಜನತಾ ಮನೆ ಹತ್ತಿರ ಹೋಗಿ ಉದ್‌ಘೋಷಣ ವರೆಂಟನ್ನು ಇಬ್ಬರು ಪಂಚರ ಸತಮಕ್ಷಮ ಜಾರಿ ಮಾಡಿ ಸದರಿ ಉದ್‌ಘೋಷಣ ವಾರೆಂಟನ್ನು ಅಮರೇಶ್ವರ ಕ್ಯಾಂಪ ಬಸನಿಲ್ದಾಣ ಹತ್ತಿರ , ಜನತಾ ಮನೆ, ಹಾಗೂ ಅಂಗನವಾಡಿ ಕೆಂದ್ರಕ್ಕೆ ಮತ್ತು ಜನವಸತಿ ಸ್ಥಳದಲ್ಲಿ ಉದ್‌ಘೋಷಣ ವಾರೆಂಟನ್ನು ಅಂಟಿಸಿ ಪ್ರಚಾರ ಮಾಡಿ, ಸದರಿ ಉದ್‌ಘೋಷಣ ವಾರೆಂಟನ್ನು ದಿನಂಕ 24-08-2018 ಬೆ. 10.11 ಗಂಟೆವೆರೆ ಜಾರಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ–4 ಎಂದು, ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–4(ಎ) ಎಂದು ಗುರುತಿಸಲಾಯಿತು, ಅದೇ ರೀತಿಯಾಗಿ ನಾನು ಈ ಬಗ್ಗೆ ನಮ್ಮ ಪೊತ್ನಾಳ ಗ್ರಾಮ ಪಂಚಾಯತಿ ಹಾಗೂ ತಹಶೀಲ್ದಾರರು ಮಾನವಿ ರವರಿಂದ ಆರೋಪಿಯ ಹೆಸರಲ್ಲಿ ಚರಾಸ್ತಿ ಮತ್ತು ಸ್ಥಿರಾಸ್ತಿ ಪತ್ರ ವ್ಯವಹಾರ ಮಾಡಿದ್ದು, ಅವುಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–5 ಮತ್ತು 6 ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ ಹೇ ಕೇ ಸ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ